# ಹಿಮಾಲಯದ ಚತುರ್ಧಾಮಗಳು

ಸ್ವಾಮಿ ವೀರೇಶಾನಂದ

*ಹಿಮಾಲಯ ಯಾತ್ರೆ ಒಂದು ಅಪೂರ್ವ ಅನುಭವ. ಅಲ್ಲಿಯ ಪ್ರವಾಸಕಥೆಯನ್ನು ಎಷ್ಟು ಓದಿದರೂ ಬೇಸರವೆನಿಸುವುದಿಲ್ಲ. "ವಿವೇಕಪ್ರಭ" ವಿಭಾಗದ ಸ್ವಾಮಿ ವೀರೇಶಾನಂದರು ತಮ್ಮ ಅನುಭವವನ್ನು ಓದುಗರೊಡನೆ ಹಂಚಿಕೊಂಡಿದ್ದಾರೆ.*

ಅಂದು ಹೃಷೀಕೇಶದಲ್ಲಿ ಬದರಿನಾಥಕ್ಕೆ ಹೋಗುವ ಬಸ್ಸನ್ನು ಹತ್ತಿದಾಗ ಬೆಳಗ್ಗೆ ೩.೪೫. ಸುತ್ತಲೂ ಕತ್ತಲು. ಬಸ್ಸು ಹೊರಟ ಸ್ವಲ್ಪ ಸಮಯದಲ್ಲಿಯೆ ನಿದ್ರೆಯಲ್ಲಿ ಮುಳುಗಿದವನು, ಕಣ್ಣುಬಿಟ್ಟಾಗ, ಹಿಮಾಲಯದ ಪರ್ವತಶಿಖರದಲ್ಲಿ, ಅಂಕುಡೊಂಕಾಗಿ ಸಾಗುತ್ತಿದ್ದ ಹಾದಿಯಲ್ಲಿ ಬಸ್ಸು ತೆವಳುತ್ತಿದ್ದುದನ್ನು ಕಂಡೆ. ಎತ್ತರೆತ್ತರಕ್ಕೆ ಏರುತ್ತಿದ್ದ ಮಾರ್ಗದ ಪಕ್ಕದಲ್ಲಿಯೆ, ನಮ್ಮ ಸಹಗಾಮಿನಿಯಾಗಿ ಇದ್ದಳು, ನೂರಾರು ಅಡಿಗಳ ಕೆಳಗಿನ ಕಂದರದಲ್ಲಿ ಜುಳು ಜುಳು ಹರಿದು ಕೆಳಗಿಳಿದು ಬರುತ್ತಿದ್ದ ಮಾತೆ ಗಂಗೆ.

ಹೃಷಿಕೇಶದಿಂದ ೭೦ ಕಿ.ಮಿ. ದೂರದಲ್ಲಿದೆ, ದೇವಪ್ರಯಾಗ. ಗಂಗೋತ್ರಿಯಾಚೆಯ ಗೋಮುಖದಿಂದ ಹರಿದು ಬರುವ ಭಾಗೀರಥಿ, ದೂರದ ಬದರಿನಾಥದಿಂದ ಇಳಿದು ಬರುತ್ತಿರುವ ಅಲಕಾನಂದ ಕೂಡಿಕೊಂಡು ಗಂಗೆ ಎಂಬ ಹೆಸರು ಪಡೆಯುವುದು ಇಲ್ಲಿಯೇ.

ಹಿಮಾಲಯವು ದೇವಭೂಮಿ ಎಂದು ಹೊಗಳಲ್ಪಟ್ಟಿದೆ. ದೇವತೆಗಳ ನೆಲೆವೀಡಾದ ಇದು ಋಷಿಗಳ ತಪೋಭೂಮಿಯೂ ಹೌದು. ಸಾಹಸಿಗಳಿಗೆ ಸವಾಲೊಡ್ಡುವ ದುರ್ಗಮ ಪರ್ವತಶ್ರೇಣಿಯೂ ಹೌದು. ಭಕ್ತಜನರ ಭಕ್ತಿಯನ್ನು ಉಕ್ಕಿಸಿದರೆ, ಸಂನ್ಯಾಸಿಗಳ ವೈರಾಗ್ಯಭಾವವನ್ನು ಇಮ್ಮಡಿಗೊಳಿಸುವುದು. ಸೌಂದರ್ಯದ ಅನ್ವೇಷಕರಿಗಂತೂ, ತೆರೆದಿಟ್ಟ ಸ್ವರ್ಗದ್ವಾರವೇ ಇದಾಗಿದೆ. ಔನ್ನತ್ಯ, ಸೌಂದರ್ಯ, ಪಾವಿತ್ರ್ಯ, ರೌದ್ರ,ರಮಣೀಯತೆಗಳ ಸಂಗಮವಾಗಿರುವ ಹಿಮದ ಈ ಆಲಯ ಕಾಳಿದಾಸ ಬಣ್ಣಿಸಿದಂತೆ "ಪೃಥಿವಿಯ ಮಾನದಂಡ"ವಾಗಿದೆಯೆಂದೇ ಹೇಳಬೇಕು.

ದೇವಪ್ರಯಾಗದಿಂದ ನಿಧಾನವಾಗಿ, ಏರುತ್ತ ಹೋಯಿತು ನಮ್ಮ ಬಸ್ಸು. ಸುಮಾರು ಹತ್ತು ಗಂಟೆಯ ಸಮಯಕ್ಕೆ ಶ್ರೀನಗರವನ್ನು ತಲುಪಿದೆವು. ಅದು ಹಿಂದೆ ಗಡವಾಲ ಪ್ರಾಂತ್ಯದ ರಾಜಧಾನಿಯಾಗಿತ್ತು. ವಿಶ್ವವಿದ್ಯಾನಿಲಯವನ್ನು ಹೊಂದಿರುವ ಈ ನಗರದಿಂದ, ಕೇವಲ ೩೨ ಕಿ.ಮಿ. ದೂರದಲ್ಲಿದೆ ರುದ್ರಪ್ರಯಾಗ. ಇದು ಬದರಿ ಕೇದಾರ ಮಾರ್ಗಗಳು ಒಟ್ಟುಗೂಡುವ ಸ್ಥಳ. ಕೇದಾರದಿಂದ ಹರಿದು ಬರುವ ಮಂದಾಕಿನಿ ಇಲ್ಲಿ ಅಲಕಾನಂದೆಯನ್ನು ಸೇರುತ್ತಾಳೆ. ಅಲ್ಲಿಂದ ಮುಂದೆ ಸಿಗುವುದು ಕರ್ಣಪ್ರಯಾಗ. ಅಲ್ಲಿ ಪಿಂಡಾರವೆಂಬ ಹೊಳೆ ಅಲಕಾನಂದೆಯನ್ನು ಕೂಡುವುದು. ಅಲ್ಲಿಂದ ೨೧ ಕಿ.ಮಿ. ದೂರದಲ್ಲಿ ಇನ್ನೊಂದು ಪ್ರಯಾಗವಿದೆ. ಅದೇ ನಂದಪ್ರಯಾಗ. ನಂದಪ್ರಯಾಗದಿಂದ ಜೋಷಿಮಠಕ್ಕೆ ೬೭ ಕಿ.ಮಿ. ದೂರ. ಜೋಷಿಮಠದಲ್ಲಿ ಶಂಕರಾಚಾರ್ಯರು ಪ್ರತಿಷ್ಠಾಪಿಸಿದ ಜ್ಯೋತಿರ್ಮಠವಿದೆ. ಚಳಿಗಾಲದ ಆರು ತಿಂಗಳು ಶ್ರೀಬದರೀ ನಾರಾಯಣ ಪೂಜೆಗೊಳ್ಳುವುದು ಇಲ್ಲಿಯೇ. ಅಲ್ಲಿಂದ ಮಾರ್ಗ ಅತಿ ಕಡಿದಾಗುತ್ತದೆ. ಹೃಷೀಕೇಶದಿಂದ ಒಟ್ಟು ೧೩ಕ್ಕೂ ಹೆಚ್ಚು ಗಂಟೆಗಳ ಸುದೀರ್ಘ, ಆದರೆ ಬಹಳ ಆನಂದಕರ ಪಯಣದ ನಂತರ ಬದರಿಧಾಮವನ್ನು ಸೇರಿದೆನು.

ಭೋರ್ಗರೆಯುತ್ತಿದೆ ಅಲಕಾನಂದಾ ನದಿ. ಅದರ ಎಡ



*ಬದರಿನಾಥನ ದೇಗುಲ*

ದಂಡೆಯ ಮೇಲೆ ಹಲವು ಮೆಟ್ಟಿಲುಗಳನ್ನು ಹತ್ತಿ ಬದರಿನಾಥನ ದೇಗುಲಕ್ಕೆ ಹೋಗಬೇಕು. ಮಂದಿರದ ಪಕ್ಕದಲ್ಲಿಯೆ ಬಿಸಿನೀರಿನ ಬುಗ್ಗೆ. ಅದನ್ನು ತಪ್ತಕುಂಡ ಎನ್ನುವರು. ಮುದ್ದಾದ ಬದ್ರಿವಿಶಾಲನ ವಿಗ್ರಹದ ಮೇಲೆ ಕಣ್ಣು ಹಾಯಿಸುತ್ತಿದ್ದಂತೆ ಭಕ್ತರು ಭಾವುಕರಾಗುವರು. ಕಣ್ಣುಗಳು ನೀರೂಡಿದವು, ಹೃದಯ ಆನಂದಭರಿತವಾಗುವುದು. ಬದರಿನಾಥನ ವಿಗ್ರಹವಲ್ಲದೆ, ನರ-ನಾರಾಯಣರ ಮೂರ್ತಿಗಳೂ ಇವೆ. ಅಲ್ಲಿನ ಅರ್ಚಕರು ಕೇರಳದ ನಂಬೂದರಿ ಬ್ರಾಹ್ಮಣರು.

ಅವರನ್ನು ರಾವಲ್‌ಜೀ ಎಂದು ಕರೆಯುವರು. ದಕ್ಷಿಣದ ತುದಿಯ ಕೇರಳದ ಬ್ರಾಹ್ಮಣರನ್ನು ಉತ್ತರದ ಔನ್ನತ್ಯ ವಲ್ಲಿರುವ ಈ ದೇಗುಲದ ಅರ್ಚಕರನ್ನಾಗಿ ನೇಮಿಸಿ ಭಾರತದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಏಕತೆಯ ಹರಿಕಾರರಾದರು ಶ್ರೀ ಶಂಕರಾಚಾರ್ಯರು.

ಬದರಿನಾಥದಲ್ಲಿಯೇ ನರ-ನಾರಾಯಣ ಋಷಿಗಳು ತಪಸ್ಸು ಮಾಡಿದ್ದು, ಶಂಕರಾಚಾರ್ಯರು ಉಪನಿಷತ್, ಬ್ರಹ್ಮಸೂತ್ರಗಳಿಗೆ ಭಾಷ್ಯ ಬರೆದಿದ್ದು. ಅಲ್ಲಿಯೇ ಅವರು ವ್ಯಾಸಮುನಿಗಳನ್ನು ಸಂದರ್ಶಿಸಿದರು. ಮಧ್ವಾ ಚಾರ್ಯರು ಕೂಡ ಇಲ್ಲಿಯೇ ವ್ಯಾಸರನ್ನು ದರ್ಶಿಸಿದರು ಎಂದು ಹೇಳಲಾಗಿದೆ. ಇಲ್ಲಿಂದ ೩ ಕಿ.ಮಿ. ದೂರದಲ್ಲಿದೆ ಭಾರತದ ಕೊನೆಯ ಗ್ರಾಮ ಮನ್ನಾ. ಅಲ್ಲಿಂದ ಟಿಬೆಟ್ ಗಡಿಯ ಬದಿಯಲ್ಲಿಯೇ ಸಾಗುವ ಮನೋಹರ ಕಾಲು ದಾರಿಯಲ್ಲಿ ನಡೆದರೆ ೫ ಕಿ.ಮಿ. ದೂರದಲ್ಲಿ ವಸುಧಾರಾ ಎಂಬ ರಮಣೀಯ ಜಲಪಾತವಿದೆ. ಅಲ್ಲಿಂದ ೨-೩ ದಿನ ಗಳವರೆಗೆ ಪರ್ವತದ ದಾರಿಯಲ್ಲಿ ನಡೆದಾಗ, ಶತ ಪಂಥ ಎಂಬ ಸರೋವರ ಸಿಕ್ಕುವುದಂತೆ. ಅಲ್ಲೇ ಪಾಂಡ ವರು ಸ್ವರ್ಗಾರೋಹಣ ಮಾಡಿದ್ದು ಎಂದು ಐತಿಹ್ಯವಿದೆ.

ಬದರಿನಾಥದಿಂದ ತಿರುಗಿ ಕೆಳಕ್ಕೆ ಇಳಿದು ಶ್ರೀನಗರಕ್ಕೆ ಬಂದೆ. ಅಲ್ಲಿ ಗಂಗೋತ್ರಿಗೆ ಹೋಗುವ ದಾರಿ ಕವಲೊಡೆ ಯುವುದು. ಶ್ರೀನಗರದಿಂದ ತೆಹರಿ ಎಂಬ ಜಾಗಕ್ಕೆ ಬರು ತ್ತೇವೆ. ಅಲ್ಲಿ ಅತಿ ದೊಡ್ಡ ಅಣೆಕಟ್ಟನ್ನು ನಿರ್ಮಿಸು ತ್ತಿದ್ದಾರೆ. ಅದಕ್ಕಾಗಿ ಗುಡ್ಡಗಳನ್ನೇ ನೆಲಸಮ ಮಾಡಿದ್ದಾರೆ, ಕಾಡುಗಳನ್ನು ಬೋಳಿಸಿದ್ದಾರೆ. ಧೂಳು-ಮಣ್ಣುಗಳ ರಾಶಿ ಅಲ್ಲಿದೆ. ಪ್ರಕೃತಿಯನ್ನು ಮಾನವ ವಿಕೃತಗೊಳಿಸಿರುವ ಬಗೆ ಯನ್ನು ಅಲ್ಲಿ ಕಾಣುತ್ತೇವೆ. ತೆಹರಿಯಿಂದ ೭೬ ಕಿ.ಮೀ. ದೂರದಲ್ಲಿ ಉತ್ತರಕಾಶಿ ಎಂಬ ಪಟ್ಟಣವಿದೆ. ಅದು ಸಾಧು ಸಂತರ ತಪಸ್ಯಾಕ್ಷೇತ್ರ. ನೂರಾರು ಆಶ್ರಮಗಳು ಗಂಗೆಯ ತಟದುದ್ದಕ್ಕೂ ಹರಡಿವೆ. ಪವಿತ್ರ ಉತ್ತರಕಾಶಿಯಿಂದ ಸುಮಾರು ೮೦ ಕಿ.ಮಿ. ದೂರದಲ್ಲಿದೆ ಗಂಗೋತ್ರಿ. ಗಂಗೋತ್ರಿಯ ದಾರಿ ಕಡಿದಾದ ದಾರಿ. ಒಂದು ಪಕ್ಕದಲ್ಲಿ ಪರ್ವತಶ್ರೇಣಿ ಆಕಾಶದೆತ್ತರಕ್ಕೆ ಚಾಚಿದ್ದರೆ, ಇನ್ನೊಂದು ಪಕ್ಕ, ಆಳವಾದ ಕಂದರದಲ್ಲಿ ಭಾಗೀರಥಿಯ ಪ್ರವಾಹ ಅಂಕುಡೊಂಕಾಗಿ ಹರಿಯುತ್ತಿದೆ.

ಗಂಗೋತ್ರಿಯಲ್ಲಿ ಗಂಗಾಮಾತೆಯ ದೇವಸ್ಥಾನವಿದೆ. ತಾಯಿ ಗಂಗೆಯನ್ನು ಭೂಮಿಗೆ ತರಲು ಭಗೀರಥ ತಪಸ್ಸು ಮಾಡಿದ ಜಾಗ ಇದೇ. ಅಲ್ಲಿ ಕೇವಲ ೬ ತಿಂಗಳು ಮಾತ್ರ ಜನರ ವಾಸ್ತವ್ಯ ಇರುತ್ತದೆ. ಚಳಿಗಾಲದಲ್ಲಿ ಆ ಪ್ರದೇಶವೆಲ್ಲ ಹಿಮಾವೃತವಾಗಿರುತ್ತದೆ. ಏಪ್ರಿಲ್ ಕೊನೆಯ ಭಾಗದಿಂದ ಅಕ್ಟೋಬರ್‌ನವರೆಗೆ ಯಾತ್ರಿಗಳು ಇಲ್ಲಿಗೆ



ಗಂಗೋತ್ರಿಯಲ್ಲಿ ಗಂಗಾಮಾತೆಯ ದೇವಸ್ಥಾನ

ಬರು ತ್ತಾರೆ. ಇಲ್ಲಿ ಗಂಗೆ ಕಾಡು-ಮೇಡುಗಳ ನಿರ್ಜನ ಪ್ರದೇಶ ದಿಂದ, ಮೊದಲ ಬಾರಿಗೆ, ನಾಗರಿಕ ಜಗತ್ತಿಗೆ ಕಾಣಿಸಿ ಕೊಳ್ಳುತ್ತಾಳೆ. ತೀವ್ರವೇಗದ ನೀರು, ಹಲವಾರು ಕಲ್ಲುಬಂಡೆ ಗಳಿಗೆ ಅಪ್ಪಳಿಸುತ್ತಾ ಭೋರ್ಗರೆಯುತ್ತಿರುತ್ತದೆ. ಗಂಗೆ ಒಮ್ಮೆ ದೊಡ್ಡ ಬಂಡೆಗಳನ್ನೇ ಕೊರೆದು, ಕಿರಿದಾದ ಜಾಗ ದಲ್ಲಿ ಬುಸುಗುಟ್ಟುತ್ತಾ ಮುಂದುವರೆಯುತ್ತಾಳೆ. ಮತ್ತೊಮ್ಮೆ, ಬಂಡೆಗಳಿಂದ ಜಿಗಿದು ಜಲಧಾರೆಯ ನೊರೆಯ ಪರ್ವತವನ್ನೇ ಸೃಷ್ಟಿಸುತ್ತಾಳೆ. ಇಲ್ಲಿ ಹಲವಾರು ಆಶ್ರಮಗಳಿವೆ. ಸಾಧು-ಸಂತರು ನೆಲಸಿದ್ದಾರೆ. ಕೆಲವರಂತೂ, ವರ್ಷದ ೧೨ ತಿಂಗಳೂ ಇಲ್ಲಿಯೇ ಇರುತ್ತಾರೆ.

ಇಲ್ಲಿಂದ ಗಂಗೆಯ ಉಗಮಸ್ಥಾನವಾದ ಗೋಮುಖವಿರು ವುದು ೧೮ ಕಿ.ಮೀ ದೂರದಲ್ಲಿ. ಅದಕ್ಕೆ ನಡೆದೇ ಹೋಗ ಬೇಕು. ಒಬ್ಬರೇ ನಡೆಯಬಹುದಾದ ಕಿರು ದಾರಿಯ ಮಧ್ಯೆ ಅನೇಕ ಝರಿಗಳು ಬೆಟ್ಟದಿಂದ ಇಳಿದು ಬರುತ್ತಿರುತ್ತವೆ. ಒಮ್ಮೆ ಮೇಲೇರುತ್ತ ಮತ್ತೊಮ್ಮೆ ಕೆಳಗಿಳಿಯುತ್ತ, ಅಂಕು ಡೊಂಕಾಗಿ ನಡೆಯುತ್ತ ಸಾಗಿದರೆ, ವಿಸ್ತಾರವಾದ ಬರಡು ಕಣಿವೆಯೊಂದನ್ನು ಕಾಣುತ್ತೇವೆ. ಕಲ್ಲುಗಳಿಂದ ತುಂಬಿದ ಅದನ್ನು ದಾಟಿದಾಗ, ಪರ್ವತ ಶಿಖರದ ಗುಹೆಯೊಂದರಿಂದ ಹರಿದುಬರುತ್ತಿರುವ ಭಾಗೀರಥಿ ಗೋಚರಳಾಗುತ್ತಾಳೆ. ಈ ಜಾಗ ಸಮುದ್ರ ಮಟ್ಟದಿಂದ ೩೮೯೨ ಮೀಟರ್ ಎತ್ತರವಿದೆ. ಇದೇ ಗೋಮುಖ ಗ್ಲೇಸಿಯರ್. ಗುರುಪೂರ್ಣಿಮೆಯ ಪರ್ವ ದಿನದಂದು ಅಲ್ಲಿ ತಾಯಿ ಗಂಗೆಯ ದರ್ಶನ ಪಡೆದು ನಾನು ಆನಂದಭರಿತನಾದೆ. ಕೊರೆಯುತ್ತಿದ್ದ ನೀರಿನಲ್ಲಿ ಸ್ನಾನ ಮಾಡಿದ ಒಡನೆ ಕಾಲು ಜೊಮ್ಮುಗಟ್ಟಿತು. ಮೈ ನಡುಗ



ಗೋಮುಖ

ಲಾರಂಭಿಸಿತು. ಬಟ್ಟೆ ಹಾಕಿಕೊಂಡು ಅಲ್ಲಿಂದ ಒಡನೆ ಕಾಲ್ತೆಗೆದೆ. ನಡೆದು ಮಧ್ಯಾಹ್ನದ ಸಮಯಕ್ಕೆ ಗಂಗೋತ್ರಿ ತಲುಪಿದೆ.

ಗಂಗೋತ್ರಿಯಿಂದ ತಿರುಗಿ ಉತ್ತರಕಾಶಿಗೆ ಬಂದೆ. ಅಲ್ಲಿ ಎರಡು ದಿನಗಳಿದ್ದು, ಯಮುನಾ ನದಿಯ ಉಗಮಸ್ಥಾನ ವಾದ ಯಮುನೋತ್ರಿಗೆ ಪ್ರಯಾಣ ಮಾಡಿದೆ. ಬೆಳಗ್ಗೆ ೬ ಗಂಟೆಗೆ ಹೊರಟ ಬಸ್ಸು ಬಾರ್‌ಕೋಟ್ ಎಂಬ ಪಟ್ಟಣ ವನ್ನು ಮಧ್ಯಾಹ್ನ ಸೇರಿತು. ಅಲ್ಲಿಂದ ಯಮುನೆಯ ದಡ ದಲ್ಲಿ, ರುದ್ರಮನೋಹರವಾದ ದಾರಿಯಲ್ಲಿ ೩೨ ಕಿ.ಮಿ. ದೂರ ಸಾಗಿದರೆ ಹನುಮಾನ್‌ಚಟ್ಟಿ ಎಂಬ ಊರು ಸಿಗುತ್ತದೆ. ಬಸ್ಸು ಗಳು ಹೋಗಬಹುದಾದ ಅಂತಿಮ ತಾಣ ಅದು. ಅಲ್ಲಿ ಸೇರುವ ಒಳಗಾಗಲೇ ಮಧ್ಯಾಹ್ನ ೨ ಗಂಟೆ. ಅಲ್ಲಿಂದ ಜೀಪಿ ನಲ್ಲಿ ಕಚ್ಚಾರಸ್ತೆಯಲ್ಲಿ ಕಾಡಿನ ಮಧ್ಯೆ ೫ ಕಿ.ಮಿ. ಹೋದರೆ ಫೂಲ್‌ಚಟ್ಟಿ ಸಿಗುತ್ತದೆ. ಅಲ್ಲಿಗೆ ಬರುವಷ್ಟರಲ್ಲಿ ಭಾರೀ ಮಳೆ ಶುರುವಾಯಿತು. ಮಳೆ ಸ್ವಲ್ಪ ಕಮ್ಮಿಯಾದೊಡನೆ ನಡೆಯಲು ಆರಂಭಿಸಿದೆ. ನನ್ನೊಡನೆ ಒಬ್ಬ ಸಾಧು ಮತ್ತು ಒಬ್ಬ ಯುವಕ ಇದ್ದರು. ಇಲ್ಲಿಂದ ೩ ಕಿ.ಮಿ ದೂರದಲ್ಲಿ ಜಾನಕಿಚಟ್ಟಿ ಎಂಬ ಕಡೆಯ ತಂಗುದಾಣವಿದೆ. ಅಲ್ಲಿಂದ ೬ ಕಿ.ಮಿ. ದೂರ, ಅತ್ಯಂತ ಕಡಿದಾದ, ಎತ್ತರ ಎತ್ತರ ಸಾಗುವ ದುರ್ಗಮ ದಾರಿಯಲ್ಲಿ ನಡೆದು ಹೋದರೆ ಯಮುನೋತ್ರಿ ಸಿಗುತ್ತದೆ. ಮಳೆಯ ನೀರಿನಿಂದ ಕೆಸರಾಗಿದ್ದ, ಜಾರುತ್ತಿದ್ದ ದಾರಿ ಯಲ್ಲಿಯೇ ಜಾಗ್ರತೆಯಿಂದ ನಡೆದು ಸಾಯಂಕಾಲ ೬ ಘಂಟೆಗೆ ಯಮುನೋತ್ರಿ ತಲುಪಿದೆವು. ಕೆಳಗೆ ನೋಡುತ್ತೇವೆ— ಆಗಲೇ ಕತ್ತಲು ಆವರಿಸಿಕೊಂಡಿತ್ತು. ಮಂಜು ಕವಿದಿತ್ತು.

ಯಮುನೋತ್ರಿಯು ಸಣ್ಣ ಜಾಗ. ಯಾತ್ರಿಕರಿಗಾಗಿ ಕೆಲವು ವಸತಿಗೃಹಗಳು ಹಾಗೂ ಅಂಗಡಿಗಳು ಇಲ್ಲಿವೆ. ಚಿಕ್ಕ ದಾದ ಯಮುನಾದೇವಿಯ ಮಂದಿರವೊಂದಿದೆ. ಅನತಿ ದೂರ ದಲ್ಲಿ ಒಂದು ಬೆಟ್ಟದಿಂದ ಕೆಳಗೆ ಧುಮುಕುತ್ತಿರುವ ಯಮುನೆಯ ಧಾರೆಯನ್ನು ನೋಡುತ್ತೇವೆ. ಅದೇ ಕೆಳಗೆ ಸಣ್ಣ ಹೊಳೆಯ ಪ್ರಮಾಣದಲ್ಲಿ ಹರಿದು ಬರುತ್ತಿದೆ. ಯಮುನೆ ಯನ್ನು ಕಂಡೊಡನೆ ನೆನಪಾಗುವುದು ಶ್ರೀಕೃಷ್ಣ. ಶ್ರೀಕೃಷ್ಣ ಲೀಲೆಯ ನಿತ್ಯಸಾಕ್ಷಿಯಾಗಿರುವುದು ಯಮುನಾನದಿ. ಗಂಗೆ ಯಂತೆ ಇಲ್ಲಿ ನದಿ ಆರ್ಭಟದಿಂದ ಕೂಡಿಲ್ಲ. ಗಾತ್ರವೂ ಸ್ವಲ್ಪವೇ. ಆದರೆ ಬಣ್ಣ ಮಾತ್ರ ಶುದ್ಧಶ್ಯಾಮಲ. ಯಮುನೋತ್ರಿ ದಟ್ಟ ಕಾಡಿನ ಮಧ್ಯೆ ಇದೆ. ಯಮುನೆ ನಿಜ ವಾಗಿ ಹುಟ್ಟುವ ಜಾಗ ಇನ್ನೂ ಎತ್ತರದಲ್ಲಿರುವ ಒಂದು ಸರೋವರ. ಅದಕ್ಕೆ ಸಾಧಾರಣ ಜನ ಹೋಗಲು ಸಾಧ್ಯ ವಿಲ್ಲ. ಯಮುನಾ ದೇವಿಯ ಮಂದಿರದ ಸನಿಹದಲ್ಲಿಯೇ ಬಿಸಿನೀರಿನ ಕುಂಡವಿದೆ. ಒಂದು ಕಡೆಯಂತೂ ನೀರು ಕುದಿ ಯುತ್ತಿರುತ್ತದೆ. ಅಕ್ಕಿಯನ್ನು ಬಟ್ಟೆಯಲ್ಲಿ ಕಟ್ಟಿ ಮುಳುಗಿ ಸಿದರೆ ನಿಮಿಷದಲ್ಲಿ ಅನ್ನವಾಗುವುದು. ಅದನ್ನು ಭಕ್ತರು ಪ್ರಸಾದವಾಗಿ ಒಯ್ಯುತ್ತಾರೆ. ಒಂದು ರಾತ್ರಿ ಅಲ್ಲಿ ಕಳೆದು, ಮರುದಿನ ಪೂಜಾದಿಗಳನ್ನು ಮಾಡಿಸಿ ಹೊರಟುಬಿಟ್ಟೆವು. ಸಾಯಂಕಾಲ ಉತ್ತರಕಾಶಿಯನ್ನು ತಲುಪಿದೆವು.




ಯಮುನೋತ್ರಿ

ಉತ್ತರಕಾಶಿಯಿಂದ ತಿರುಗಿ ತೆಹರಿ, ಶ್ರೀನಗರ ಮಾರ್ಗ ವಾಗಿ ರುದ್ರಪ್ರಯಾಗವನ್ನು ತಲುಪಿದೆ. ಅಲ್ಲಿಂದ ಜೀಪಿನಲ್ಲಿ ಕೇದಾರಕ್ಕೆ ಪ್ರಯಾಣ ಮಾಡಿದೆ. ಮಾರ್ಗದಲ್ಲಿ, ಗುಪ್ತಕಾಶಿ ಎಂಬ ಪವಿತ್ರ ಸ್ಥಾನವಿದೆ. ದಾರಿಯುದ್ದಕ್ಕೂ ಹರಿದು ಬರು ತ್ತಿದೆ ಮಂದಾಕಿನಿ. ಗೌರೀಕುಂಡ ಎಂಬ ಜಾಗವನ್ನು ಸಂಜೆ ಸೇರಿದೆ. ಇಲ್ಲಿಯವರೆಗೆ ವಾಹನಗಳು ಬರುತ್ತವೆ. ನಂತರದ ದಾರಿಯನ್ನು ಕಾಲುನಡಿಗೆಯಲ್ಲಿಯೇ ಕ್ರಮಿಸಬೇಕು. ಅಂದು ರಾತ್ರಿ ಗೌರೀಕುಂಡದಲ್ಲಿಯೇ ತಂಗಿದೆ. ರಾತ್ರಿಯೆಲ್ಲ ಧಾರಾ ಕಾರವಾದ ಮಳೆ. ಮುಂಜಾನೆ ಎದ್ದು ನೋಡಿದಾಗ ಮಳೆ ನಿಂತಿತ್ತು. ಬೆಳಗ್ಗೆ ೫.೩೦ಕ್ಕೇ ಕೇದಾರಕ್ಕೆ ಹೊರಟುಬಿಟ್ಟೆ.

ಗೌರೀಕುಂಡದಿಂದ ಕೇದಾರಕ್ಕೆ ೧೪ ಕಿ.ಮಿ. ದೂರ. ರಸ್ತೆ ಅಷ್ಟೇನೂ ಇಕ್ಕಟ್ಟಾಗಿಲ್ಲ. ಬಹುತೇಕ ಸಿಮೆಂಟ್ ದಾರಿ. ಆದ್ದ ರಿಂದ ನಡೆಯಲು ಕಷ್ಟವಾಗದು. ದಾರಿ ತಕ್ಕಮಟ್ಟಿಗೆ ಚೆನ್ನಾ ಗಿದ್ದರೂ, ಏರುತ್ತಲೇ ಹೋಗುತ್ತದೆ. ಆರು ಕಿ.ಮಿ. ಹೋದ ನಂತರ ರಾಮಬಾರಾ ಎಂಬ ಸ್ಥಳ ತಲುಪುತ್ತೇವೆ. ಅಲ್ಲಿ ಸ್ವಲ್ಪ ವಿಶ್ರಮಿಸಿಕೊಂಡು ತಿರುಗಿ ನಡೆಯಲು ಆರಂಭಿಸಿದೆ. ಕೇದಾರಕ್ಕೆ ಮೂರು ಕಿ.ಮಿ. ಇರುವಾಗ ಗೌರ್‌ಚೆಟ್ಟಿ ಎಂಬ ಸ್ಥಳ ಸಿಗುತ್ತದೆ. ಅಲ್ಲಿನ ಒಂದು ಜಾಗದಲ್ಲಿ ಕೇದಾರೇಶ್ವರ ದೇಗುಲದ ಗೋಪುರವನ್ನು ಕಾಣುತ್ತೇವೆ. ಶ್ರಮಪಟ್ಟು ನಡೆದು ಬರುವ ಭಕ್ತರು ಗೋಪುರವನ್ನು ಕಂಡೊಡನೆ, ಆನಂದಿತ ರಾಗುತ್ತಾರೆ. "ಕೇದಾರನಾಥ ಕೀ ಜೈ" ಎನ್ನುತ್ತಾ ನಮಿಸುತ್ತಾರೆ.

ಸ್ವಲ್ಪ ದೂರ ನಡೆದ ನಂತರ, ವಿಶಾಲವಾದ ಬಯಲಿ ನಂತಹ ಪ್ರದೇಶ ಸಿಕ್ಕುತ್ತದೆ. ದೂರದಲ್ಲಿ ವಸತಿ ಗೃಹಗಳು, ಅಂಗಡಿಮುಂಗಟ್ಟುಗಳು ಇರುವ ಕೇದಾರಕ್ಷೇತ್ರ ಕಾಣಿಸು ತ್ತದೆ. ಮಂದಾಕಿನಿಯ ಮೇಲಿರುವ ಸೇತುವೆಯನ್ನು ದಾಟಿ, ಒಂದೇ ರಸ್ತೆಯಲ್ಲಿ ನಡೆದು ಹೋದರೆ, ಕೇದಾರೇಶ್ವರ ದೇವ ಸ್ಥಾನ ಕಾಣಿಸುತ್ತದೆ. ಭಕ್ತನ ಮೈ ದಣಿದಿದ್ದರೂ ಮನ ಉಲ್ಲಾಸಗೊಳ್ಳುತ್ತದೆ, ಭಕ್ತಿಭಾವದಿಂದ ತುಂಬಿಕೊಳ್ಳುತ್ತದೆ.



*ಕೇದಾರೇಶ್ವರ ದೇವಸ್ಥಾನ*

ಕೇದಾರೇಶ್ವರ ಮಂದಿರ ಕಲ್ಲಿನಿಂದ ಕಟ್ಟಲ್ಪಟ್ಟಿದ್ದು ಭವ್ಯ ವಾಗಿದೆ. ಎತ್ತರದ ಜಾಗದಲ್ಲಿ ಕಟ್ಟಿದ ದೇಗುಲದ ಸುತ್ತಲೂ, ಕಲ್ಲು ಚಪ್ಪಡಿಗಳನ್ನು ಹಾಸಿದ್ದಾರೆ. ದಕ್ಷಿಣಭಾರತ ಶೈಲಿ ಯಲ್ಲಿರುವ ದೇವಾಲಯದ ಅರ್ಚಕರು, ಕರ್ನಾಟಕದ ವೀರ ಶೈವ ಸಂಪ್ರದಾಯಕ್ಕೆ ಸೇರಿದವರು, ಪಂಚಾಚಾರ್ಯ ಪಂಗಡದವರು. ದೇವಾಲಯದ ಹಿಂದೆ ಹಿಮಾನ್ವಿತವಾದ ಪರ್ವತಗಳು, ಒಟ್ಟುನೋಟಕ್ಕೆ ಮೆರಗು ನೀಡುತ್ತವೆ.

ಈ ಕೇದಾರೇಶ್ವರ ದೇವಸ್ಥಾನವನ್ನು ಪಾಂಡವರು ಕಟ್ಟಿ ಸಿದ್ದು ಎನ್ನಲಾಗಿದೆ. ಕುರುಕ್ಷೇತ್ರ ಯುದ್ಧದ ತರುವಾಯ ಪಾಂಡವರು ಶಿವನನ್ನು ಅರ್ಚಿಸಲು ಕಾಶಿಗೆ ಹೋದರು. ಶಿವನು ಅಲ್ಲಿಂದ ಹಿಮಾಲಯದೆಡೆಗೆ ಹೋಗಿ, ಗುಪ್ತಕಾಶಿ ಯಲ್ಲಿ ಅಡಗಿಬಿಟ್ಟ. ಪಾಂಡವರು ಶಿವನ ಜಾಡು ಹಿಡಿದರು. ಶಿವ ಅಲ್ಲಿಂದ ಕೇದಾರಕ್ಕೆ ಹೋಗಿ, ಗೂಳಿಯ ರೂಪ ತಾಳಿ, ದನದ ಮಂದೆಯ ಮಧ್ಯದಲ್ಲಿ ಹುಲ್ಲು ಮೇಯುತ್ತಿದ್ದ. ಸಾಯಂಕಾಲ ಹಸುಗಳು ವಾಪಸ್ಸಾಗುವ ಸಮಯದಲ್ಲಿ ಭೀಮ ತನ್ನೆರಡೂ ಕೈಗಳನ್ನು ಪರ್ವತ ಶಿಖರಗಳ ಮಧ್ಯೆ ಚಾಚಿ ನಿಂತ. ಅವನ ಕಾಲುಗಳ ಮಧ್ಯೆ, ಎಲ್ಲ ಹಸುಗಳು ನುಸುಳಿ ದರೂ, ಶಿವನ ರೂಪದಲ್ಲಿದ್ದ ಗೂಳಿ ನುಸುಳಲಿಲ್ಲ. ಭೀಮ ಕೆಳಕ್ಕೆ ಬಗ್ಗಿ ಆ ಗೂಳಿಯನ್ನು ಹಿಡಿದಾಗ, ಶಿವ ನೆಲದ ಒಳಗೆ ಹೋಗಿಬಿಟ್ಟ. ಭೀಮನಿಗೆ ಸಿಕ್ಕಿದ್ದು ಗೂಳಿರೂಪದ ಶಿವನ ಬೆನ್ನು ಮಾತ್ರ. ಪಾಂಡವರ ಭಕ್ತಿಗೆ ತೃಪ್ತನಾದ ಶಿವ ಅದನ್ನೇ ಪೂಜಿ ಸಲು ಹೇಳಿದ. ಪಾಂಡವರು ಹೀಗೆ ಶಿವನನ್ನು ಪೂಜಿಸಿ, ಯುದ್ಧದಲ್ಲಿ ತಮ್ಮ ಬಂಧುಬಾಂಧವರನ್ನು ಕೊಂದ ಪಾಪ ವನ್ನೆಲ್ಲ ಕಳೆದುಕೊಂಡರು.

ಕೇದಾರೇಶ್ವರ ದೇವಸ್ಥಾನದಲ್ಲಿ ಮಧ್ಯಾಹ್ನದವರೆಗೂ ಭಕ್ತರು ಸ್ವತಃ ಅರ್ಚನೆ ಮಾಡಬಹುದು. ಸಾಯಂಕಾಲ ಕೇದಾರಲಿಂಗವನ್ನು ಬಗೆಬಗೆಯಾಗಿ ಶೃಂಗರಿಸಿ ಇಟ್ಟಿರುತ್ತಾರೆ. ಏಳು ಗಂಟೆಗೆ ಸುಮಾರು ಅರ್ಧಗಂಟೆ ಕಾಲ ಆರತಿ ನಡೆ ಯುತ್ತದೆ. ಅದನ್ನು ನೋಡುವುದೇ ಕಣ್ಣಿಗೆ ಹಬ್ಬ. ದೇವ ಸ್ಥಾನದ ಹಿಂದುಗಡೆಯಲ್ಲಿ ಸ್ವಲ್ಪ ದೂರ ಹೋದರೆ ಶಂಕರಾ ಚಾರ್ಯರ ಸ್ಮಾರಕ ಮತ್ತು ಸಮಾಧಿ ಮಂದಿರವನ್ನು ನೋಡ ಬಹುದು. ಶಂಕರಾಚಾರ್ಯರು ಇಲ್ಲಿಂದಲೇ ಕಡೆಯದಾಗಿ ಎಂದಿಗೂ ತಿರುಗಿಬಾರದೆ, ಹೊರಟು ಹೋದರು ಎಂದು ಐತಿಹ್ಯವಿದೆ. ಅಂದು ರಾತ್ರಿ ಕೇದಾರದಲ್ಲಿ ಕಳೆದೆನು. ಮುಂಜಾನೆ ಐದು ಗಂಟೆಯ ಹೊತ್ತಿಗೆ ತಿರುಗಿ ಕೇದಾರೇಶ್ವರನ ದರ್ಶನ ಮಾಡಿದೆನು. ಮುಂಜಾನೆಯ ಪ್ರಶಾಂತ ವಾತಾವರಣ ದಲ್ಲಿ ಆ ಪರಿಸರ ಇನ್ನೂ ಪವಿತ್ರವಾಗಿ ತೋರುತ್ತದೆ. ಮನಸ್ಸಿನೊಳಗೆ ಹೇಳಲಾಗದ ಶಾಂತಿ ತುಂಬಿಕೊಳ್ಳುತ್ತದೆ.

ಸಂಪ್ರದಾಯದ ಪ್ರಕಾರ, ಈ ನಾಲ್ಕು ಧಾಮಗಳನ್ನು ದರ್ಶಿ ಸುವವರು ಮೊದಲು ಯಮುನೋತ್ರಿ, ನಂತರ ಗಂಗೋತ್ರಿ, ಅನಂತರ ಕೇದಾರಗಳನ್ನು ದರ್ಶಿಸಿ, ಕಡೆಗೆ ಬದರೀನಾಥಕ್ಕೆ ಹೋಗಬೇಕು. ಈ ಪದ್ಧತಿಯ ಪ್ರಕಾರ, ಅನೇಕ ಭಕ್ತರು ತೀರ್ಥ ಯಾತ್ರೆ ಮಾಡುತ್ತಿರುವುದನ್ನು ಕಾಣುತ್ತೇವೆ. ಅವರಲ್ಲಿ ಸಾಧುಗಳ ಸಂಖ್ಯೆಯೂ ಗಣನೀಯ. ಹಲವರಂತೂ ಕಾಲ್ನಡಿಗೆ ಯಲ್ಲಿಯೇ ಚತುರ್ಧಾಮಗಳ ಯಾತ್ರೆ ಮಾಡುತ್ತಾರೆ. ತೀರ್ಥ ಕ್ಷೇತ್ರಗಳಲ್ಲಿ ಭಗವಂತನ ವಿಶೇಷ ಸಾನ್ನಿಧ್ಯವಿರುತ್ತದೆ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಆ ಸಾನ್ನಿಧ್ಯದ ಪವಿತ್ರ ಅನು ಭವವನ್ನು ನಮ್ಮ ನಮ್ಮ ಸ್ಥಳಗಳಲ್ಲಿಯೂ ಕಾಯ್ದುಕೊಳ್ಳಲು ಪ್ರಯತ್ನಿಸಿದರೆ, ತೀರ್ಥಯಾತ್ರೆ ಸಫಲವಾದಂತೆ.